# ಪರ್ಯಾಯ

‘ಪ್ರತಿಷ್ಠಿತ ಕಾಲೇಜಿನ ಎಂಬಿಎ ಡಿಗ್ರಿ ಬೆನ್ನ ಹಿಂದೆ ಇದೆ... ನಮ್ಮ ಕಂಪೆನಿಯೂ ಸೇರಿ ವಿಭಿನ್ನ ಕಂಪೆನಿಗಳಲ್ಲಿಯ ಹತ್ತು ವರ್ಷಗಳ ಅನುಭವ ಇದೆ... ಅವನು ಕೇಳುವ ಸಂಬಳಕ್ಕೆ ಯಾವ ಕಂಪೆನಿಯವರು ಬೇಕಾದರೂ ಆತನನ್ನು ಕೆಲಸಕ್ಕೆ ಸೇರಿಸಿಕೊಳ್ಳುತ್ತಾರೆ’ ಎಂದ ಮೆನನ್.

‘ನೀನೀಗ ಏನು ಹೇಳುವುದು?’ ಅಂದರು ಶರ್ಮಾ.

‘ನಾನು ಮತ್ತೆ ಮತ್ತೆ ಅದನ್ನೇ ಹೇಳುವುದು... ರಾಜೀನಾಮೆ ಕೊಡುತ್ತೇನೆ ಅನ್ನುತ್ತಿರುವ ಗೌರವನನ್ನು ಹೇಗಾದರೂ ಒಲಿಸಿ ಉಳಿಸಿಕೊಳ್ಳಬೇಕು. ಅದರಿಂದ ಕಂಪೆನಿಗೆ, ನನಗೆ, ನಿಮಗೆ ಎಲ್ಲರಿಗೂ ಅನುಕೂಲ’ ಮೆನನ್ ದೃಢವಾಗಿ ನುಡಿದ.

‘ನಮ್ಮಲ್ಲಿ ಒಂದು ವೇತನ ಶ್ರೇಣಿ ಅಂತಿದೆ ಅನ್ನುವುದು ನಿನಗೂ ಗೊತ್ತಿದೆಯಲ್ಲ, ಅದರೊಳಗೇಯಾದರೆ ಏನಾದರೂ ಮಾಡಬಹುದಿತ್ತು. ಆತ ಕೇಳುತ್ತಿರುವುದು ನಿನ್ನ ಸಂಬಳಕ್ಕಿಂತಲೂ ಜಾಸ್ತಿ, ಬರೋಬ್ಬರಿ ನನ್ನ ಸಂಬಳವೇ... ನಮ್ಮ ಡಿಗ್ರಿ, ನಮ್ಮ ಅನುಭವ ಇದೆಲ್ಲಾ ಅವನಿಗೆ ಏನೂ ಅಲ್ಲವೇ?’ ಶರ್ಮಾ ಚಡಪಡಿಸಿದರು.

‘ನಾವೇನು ಅನ್ನುವುದು ಅವನಿಗೆ ಚೆನ್ನಾಗಿ ಗೊತ್ತಿದೆ. ನನಗೂ ಗೊತ್ತಿದೆ. ಅದಕ್ಕೇ ನಾನು ಹೇಳುತ್ತಿರುವುದು ಅವನನ್ನು ಉಳಿಸಿಕೊಳ್ಳಿ ಅಂತ. ಅವನೇನಾದರೂ ನಮ್ಮ ಪ್ರತಿಸ್ಪರ್ಧಿ ಕಂಪೆನಿಗಳನ್ನು ಸೇರಿದರೆ, ನಾಳೆ ನಾನು, ನೀವು ಇಲ್ಲಿ ಕುಳಿತು ಏನು ಮಾಡಬಲ್ಲೆವು ಅನ್ನುವುದನ್ನು ಸ್ವಲ್ಪ ಲೆಕ್ಕ ಹಾಕಿ ನೋಡಿಕೊಳ್ಳಿ...’ ಯಾವ ಮುಲಾಜೂ ಇಲ್ಲದೆ ಮೆನನ್ ತಲೆಗೆ ಮೊಳೆ ಹೊಡೆದಂತೆ ಹೇಳಿದ್ದನ್ನು ಕೇಳಿ ಶರ್ಮಾ ಬೆಚ್ಚಿ ಬಿದ್ದರು.

“ನಿನ್ನಲ್ಲಿ ಹಲವು ಬಾರಿ ಹೇಳಿದ್ದೆ... ಒಬ್ಬನೇ ಜ್ಯೂನಿಯರ್ ಉದ್ಯೋಗಿಗೆ ಅಷ್ಟೆಲ್ಲ ಇಂಪಾರ್ಟೆನ್ಸು ಕೊಡಬೇಡ, ಅವಕಾಶಗಳನ್ನು ಕೊಟ್ಟು ಬೇರೆಯವರನ್ನೂ ಬೆಳೆಸು ಅಂತ.. ನೀನೋ... ಎಲ್ಲವನ್ನೂ ಗೌರವನ ಕೈಯಲ್ಲೇ ಮಾಡಿಸಿ ಅವನನ್ನೇ ಬೆಳೆಸಿದೆ.. ಈಗ ಆತ ನಿನಗಿಂತ ಜಾಸ್ತಿ ಸಂಬಳ ಕೇಳುತ್ತಿದ್ದಾನೆ... ಆದರೂ ನೀನು ‘ಅವನನ್ನು ಉಳಿಸಿಕೊಳ್ಳಿ, ಬೇರೆ ದಾರಿಯಿಲ್ಲ’ ಅನ್ನುತ್ತಿದ್ದೀಯಾ... ‘ಹೋದರೆ ಹೋಗಲಿ ಸರ್... ಅವನಂತಹ ಡಜನ್ ಉದ್ಯೋಗಿಗಳನ್ನು ಬೆಳೆಸಬಲ್ಲೆ’ ಎಂದು ನೀನು ಛಲ ತೋರಿಸಬೇಕಿತ್ತು... ಅದು ಬಿಟ್ಟು ನೀನೇ ನಿನಗಿಂತಲೂ ಹೆಚ್ಚು ಸಂಬಳಕ್ಕೆ ಅವನು ಅರ್ಹ ಅನ್ನುತ್ತಿದ್ದೀಯಲ್ಲ...” ರೇಗಿ ಅಣಕಿಸಿದರು ಶರ್ಮಾ.